ತೆರೆ ಕಂಡಿದ್ದು ನೂರು, ಗೆದ್ದಿರುವುದು ಎರಡು! ಇದು 2018ರ ಮೊದಲ ಆರು ತಿಂಗಳಲ್ಲಿನ ಕನ್ನಡ ಚಿತ್ರರಂಗದ ಸಿನಿಮಾ ಲೆಕ್ಕಾಚಾರ. ಶಿವರಾಜ್‌ಕುಮಾರ್ ಹಾಗೂ ಸೂರಿ ಸಮೀಕರಣದ 'ಟಗರು' ದೊಡ್ಡ ಯಶಸ್ಸನ್ನು ಕಂಡರೆ, ಹೊಸಬರ 'ಗುಲ್ಟು' ಸಿನಿಮಾ ಕೂಡ ಗಮನಾರ್ಹ ಗಳಿಕೆಯನ್ನು ತನ್ನದಾಗಿಸಿಕೊಂಡಿದೆ. ಈ ಎರಡು ಯಶಸ್ಸಿನ ಕಥೆಗಳ ಜೊತೆಗೆ ಒಂದೆರಡು ಸಮಾಧಾನಕರ ಎನ್ನಬಹುದಾದ ಉದಾಹರಣೆಗಳನ್ನು ಹೊರತುಪಡಿಸಿದರೆ ಉಳಿದುದೆಲ್ಲ ದಾರುಣ ಸೋಲಿನ ಕಥೆಗಳೇ.

2018ರ ಮೊದಲ ಭಾಗದಲ್ಲಿ ಸೋಲಿನ ಮೇಲೆ ಸೋಲನ್ನುಂಡಿರುವ ಗಾಂಧಿನಗರ, ಸ್ಟಾರ್ ಚಿತ್ರಗಳ ಮೂಲಕ ವರ್ಷದ ಎರಡನೇ ಭಾಗದಲ್ಲಿ ಚೇತರಿಸಿಕೊಳ್ಳುವ ಕನಸು ಕಾಣುತ್ತಿದೆ. ಗೆಲುವಿನ ಆಮ್ಲಜನಕಕ್ಕೆ ಕನ್ನಡ ಚಿತ್ರರಂಗ ಹಾತೊರೆಯುತ್ತಿರುವ ಸಂದರ್ಭದಲ್ಲೇ, ಕನ್ನಡದ ಕಿರುತೆರೆ ಲಕಲಕನೆ ಹೊಳೆಯುತ್ತಿರುವುದು ಈ ಹೊತ್ತಿನ ಮನರಂಜನಾ ಲೋಕದ ವಿಶೇಷ.

ಒಂದು ಕಾಲದಲ್ಲಿ ಟೀವಿ ಎನ್ನುವುದು ಸಿನಿಮಾದವರ ಪಾಲಿಗೆ ಕಂಟಕದ ರೂಪದಲ್ಲಿ ಕಾಣಿಸುತ್ತಿತ್ತು. ನಂತರ ಅದೇ ಟೀವಿ ವಾಹಿನಿಗಳು, ಸಿನಿಮಾ ಪ್ರಸಾರದ ಹಕ್ಕುಗಳಿಗೆ ದೊಡ್ಡ ಮೊತ್ತವನ್ನು ನೀಡಿ ಖರೀದಿಸುವುದರ ಮೂಲಕ ಚಿತ್ರೋದ್ಯಮಕ್ಕೆ ಟಾನಿಕ್‌ನಂತೆ ಪರಿಣಮಿಸಿದವು. ಈಗ ಟೀವಿ ಷೋಗಳು ಕೂಡ ಚಿತ್ರೋದ್ಯಮದವರ ಪಾಲಿಗೆ ಲಾಭದಾಯಕವಾಗಿ ಪರಿಣಮಿಸಿವೆ. ಕಿರುತೆರೆಯಲ್ಲಿ ನಟಿಸುವ ಕುರಿತು ಹೊಂದಿದ್ದ ಮಡಿವಂತಿಕೆಯನ್ನು ತೊರೆದಿರುವ ಹಿರಿತೆರೆಯ ಮಂದಿ ಟೀವಿ ಷೋಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದರೊಂದಿಗೆ ಟೀವಿಗೆ ಹೊಸ ವರ್ಚಸ್ಸು ದೊರೆತಿದೆ, ಸಿನಿಮಾ ಮಂದಿಯ ಪಾಲಿಗೆ ಗಳಿಕೆ– ಜನಪ್ರಿಯತೆಯ ಹೊಸ ಕವಲಾಗಿ ಕಿರುತೆರೆ ಒದಗಿಬಂದಿದೆ.

## ಅಮಿತಾಭ್ ತೆರೆದ ದಿಡ್ಡಿಬಾಗಿಲು

ಸಿನಿಮಾಗಳಲ್ಲಿ ನಟಿಸಿದ ಕಲಾವಿದರು ಆಗೊಮ್ಮೆ ಈಗೊಮ್ಮೆ ಕಿರುತೆರೆ ಷೋ– ಧಾರಾವಾಹಿಗಳಲ್ಲಿ ನಟಿಸುವುದು ನಡೆದೇ ಇತ್ತು. ಆದರೆ, ತಾರಾ ವರ್ಚಸ್ಸಿನ ನಟರು ಕಿರುತೆರೆಯತ್ತ ಮುಖ ಮಾಡುವುದಕ್ಕೆ ಮುನ್ನುಡಿ ಬರೆದದ್ದು ಅಮಿತಾಭ್ ಬಚ್ಚನ್. 2000ನೇ ಇಸವಿಯಲ್ಲಿ ಪ್ರಸಾರಗೊಂಡ 'ಕೌನ್ ಬನೇಗ ಕರೋಡ್‌ಪತಿ' ರಿಯಾಲಿಟಿ ಷೋ ಮೊದಲ ಆವೃತ್ತಿ ಕಿರುತೆರೆಯ ಚರಿತ್ರೆಯಲ್ಲೊಂದು ಮೈಲುಗಲ್ಲು. ಸ್ವತಃ ಅಮಿತಾಭ್ ಮಟ್ಟಿಗೂ ಈ ಷೋ ಒಂದು ಮಹತ್ವದ ತಿರುವು. ವೃತ್ತಿ ಜೀವನದಲ್ಲೂ ವೈಯಕ್ತಿಕ ಜೀವನದಲ್ಲೂ ಕೊಂಚ ಮಂಕಾಗಿದ್ದ ಅಮಿತಾಭ್, ಕಿರುತೆರೆ ಷೋ ನಿರೂಪಣೆಯ ಹೊಣೆ ವಹಿಸಿಕೊಂಡಾಗ ಅನೇಕರು ಬಿಗ್ ಬಿ ವರ್ಚಸ್ಸಿನ ಕೊನೆಯ ಕಸರತ್ತು ಎಂದೇ ಭಾವಿಸಿದ್ದರು.

ಆದರೆ, ವೀಕ್ಷಕರಲ್ಲಿ ಕೋಟಿ ರೂಪಾಯಿಯ ಕನಸನ್ನು ಬಿತ್ತಿದ ರಿಯಾಲಿಟಿ ಷೋ ಅಮಿತಾಭ್ ಪಾಲಿಗೂ ಅಮೃತಧಾರೆಯಾಗಿ ಪರಿಣಮಿಸಿತು. ಷೋ ಅಭೂತಪೂರ್ವ ಗೆಲುವು ಸಾಧಿಸಿತು, ಅದರೊಂದಿಗೆ ಅಮಿತಾಭ್ ಕೂಡ ಗೆಲುವಿನ ನಗು ನಕ್ಕರು. ಅಷ್ಟು ಮಾತ್ರವಲ್ಲ – ಬಾಲಿವುಡ್ ಅವರನ್ನು ಮತ್ತೆ ಸ್ವಾಗತಿಸಿತು. ಹಿಂದಿ ಚಿತ್ರರಂಗದ ನಿರ್ದೇಶಕರ ಕಣ್ಣಿಗೆ ಅಮಿತಾಭ್ ಒಮ್ಮೆಗೇ ಪ್ರಬುದ್ಧ ನಟನಂತೆ ಕಾಣಿಸತೊಡಗಿದರು. ನಂತರದಲ್ಲಿ ಅವರು ನಟಿಸಿದ ಬಹುತೇಕ ಚಿತ್ರಗಳು ಜನಮನ್ನಣೆ ಗಳಿಸಿದವು. ಅಮಿತಾಭ್ ಪಾಲಿಗೆ ವಸಂತ ಮರಳಿತ್ತು.

ಹಿಂದಿಯ ಕಿರುತೆರೆಯಲ್ಲಿ ಅಮಿತಾಭ್ ಗಳಿಸಿದ ಯಶಸ್ಸು ಉಳಿದ ನಾಯಕ ನಟರಿಗೂ ಕಿರುತೆರೆಯೊಂದಿಗೆ ಗುರ್ತಿಸಿಕೊಳ್ಳಲು ಪ್ರೇರಣೆಯಾಯಿತು. ಬಾಲಿವುಡ್‌ನ ಸೂಪರ್‌ಸ್ಟಾರ್ ಅಮಿತಾಭ್ ಅವರೇ ಕಿರುತೆರೆಗೆ ಬಂದ ಮೇಲೆ ನಮ್ಮದೇನು ಮಹಾ ಎನ್ನುವಂತೆ ಅನೇಕ ನಟನಟಿಯರು ಕಿರುತೆರೆಯಲ್ಲಿ ಕಾಣಿಸಿಕೊಂಡರು. ಅದರೊಂದಿಗೆ ಟೀವಿಯ ಟಿಆರ್‌ಪಿ ಕೂಡ ಗಣನೀಯವಾಗಿ ಹೆಚ್ಚಾಯಿತು. 'ಕೌನ್ ಬನೇಗಾ ಕರೋಡ್‌ಪತಿ'ಯ ಸರಣಿಯಲ್ಲಿ ಬಿಗ್ ಬಿ ಜಾಗದಲ್ಲಿ ಶಾರೂಖ್ ಕೂತಿದ್ದೂ ಆಯಿತು.




ಡಾನ್ಸಿಂಗ್ ಸ್ಟಾರ್ ಷೋನಲ್ಲಿ ಮಯೂರಿ, ರವಿಚಂದ್ರನ್, ಪ್ರಿಯಾಮಣಿ